ತಾಲ್ಲೂಕು.

15. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಲಾಡಿ,ಉಡುಪಿ ತಾಲ್ಲೂಕು.

<u>ಧಾರವಾಡ ಜಿಲ್ಲೆ :</u>

16. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ , ದಾಂಬಾಲ್, ಮುಂಡರಗಿ ತಾಲ್ಲೂಕು.

<u>ಚಿಕ್ಕಮಗಳೂರು ಜಿಲ್ಲೆ :</u>

17. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗೋಣಿಬೀಡು, ಮೂಡಿಗೆರೆ ತಾಲ್ಲೂಕು.

18. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಚಿಕ್ಕಮಗಳೂರು ಟೌನ್.

<u>ಬಳ್ಳಾರಿ ಜಿಲ್ಲೆ :</u>

19. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ ,ಕುಮಾರನಹಳ್ಳಿ, ಹಡಗಲಿ ತಾಲ್ಲೂಕು.

20. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಉಜ್ಜಯಿನಿ, ಕೂಡ್ಲಿಗಿ ತಾಲ್ಲೂಕು.

21. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕಮಲಾಪುರ, ಹೊಸಪೇಟೆ ತಾಲ್ಲೂಕು.

<u>ತುಮಕೂರು ಜಿಲ್ಲೆ :</u>

22. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೇಡತ್ತೂರು, ಮಧುಗಿರಿ ತಾಲ್ಲೂಕು.

23. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ವಲ್ಲೂರು, ಪಾವಗಡ ತಾಲ್ಲೂಕು.

24. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಲವನಹಳ್ಳಿ, ಕೊರಟಗೆರೆ ತಾಲ್ಲೂಕು.

<u>ಚಿತ್ರದುರ್ಗ ಜಿಲ್ಲೆ :</u>

25. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಿರಾಸಾಬನಹಳ್ಳಿ, ಚಳ್ಳಕೆರೆ ತಾಲ್ಲೂಕು.

<u>ವಿಷಯ :- ಬೆಳಗಾವಿ ಜಿಲ್ಲೆಯಲ್ಲಿ ಖಾದಿ ಉತ್ಪಾದನೆ.</u>

Q:1414

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಬೆಳಗಾವಿ ಜಿಲ್ಲೆಯಲ್ಲಿ ಖಾದಿ ಉತ್ಪಾದನೆ ಮಾಡಲು ಸಾಕಷ್ಟು ಸವಲತ್ತುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಹಾಗಿದ್ದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಖಾದಿ ಉತ್ಪಾದನೆ ಮಾಡುವಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

3) ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚಿಗೆ ಖಾದಿ ಉತ್ಪಾದನೆ ಮಾಡಲು ಹೆಚ್ಚಿನ ಸವಲತ್ತುಗಳು ಇದ್ದರೂ ಸಹ ಇನ್ನೂ ಯಾವುದೇ ಹೆಚ್ಚಿನ ಬೆಳವಣಿಗೆಯನ್ನು ಮಾಡದಿರುವುದು ನಿಜವೇ?

4) ಹೆಚ್ಚಿನ ಪ್ರಗತಿಯನ್ನು ಮಾಡದೆ ಇದ್ದ ಅಧಿಕಾರಿಗಳ ವೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?

5) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಪೈಕಿ ಬಡದಿ ಗ್ರಾಮದಲ್ಲಿ ಖಾದಿ ಗ್ರಾಮೋದ್ಯೋಗದಿಂದ ಅಂಬರ ಚರಕಾ ಕೇಂದ್ರವನ್ನು ಅಥವಾ ಯಾವುದೇ ಖಾದಿ ಉತ್ಪಾದನೆ ಘಟಕವನ್ನು ಮಾಡಬೇಕೆಂಬುದು ಮೊದಲಿನಿಂದಲೂ ಜನರ ಬೇಡಿಕೆ ಇದ್ದರೂ ಇನ್ನೂವರೆಗೆ ಅಲ್ಲಿ ಯಾವುದೇ ಕೇಂದ್ರ ಸ್ಥಾಪನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

6) ಹಾಗಿದ್ದಲ್ಲಿ ಇನ್ನು ಮುಂದೆಯಾದರೂ ಖಾದಿ ಉತ್ಪಾದನಾ ಕೇಂದ್ರ ಅಥವಾ ಅಂಬರ ಚರಕಾ ಕೇಂದ್ರ ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

1) ಹೌದು.

2) ಬೆಳಗಾಂ ಜಿಲ್ಲೆಯಲ್ಲಿ ಖಾದಿ ಉತ್ಪಾದನಾ ಕಾರ್ಯಕ್ಕೆ 7 ಸಂಸ್ಥೆಗಳಿಗೆ ಧನಸಹಾಯ ನೀಡಲಾಗಿದೆ. ಈ ಮೇಲೆ ತಿಳಿಸಿದ ಉತ್ಪಾದನಾ ಘಟಕಗಳಿಗೆ ಮಂಡಲಿಯು 32,51,849-00 ರೂ.ಗಳನ್ನು ಹಣಕಾಸಿನ ನೆರವಾಗಿ ನೀಡಿದೆ.ಇದಲ್ಲದೆ, 21 ಸಂಸ್ಥೆಗಳು ಉಣ್ಣೆ ಖಾದಿ ಉತ್ಪಾದನೆಯಲ್ಲಿ ತೊಡಗಿದ್ದು ಇವುಗಳಿಗೆ ಮಂಡಲಿಯು 1,14,23,807-00 ರೂ. ಗಳನ್ನು ಹಣಕಾಸಿನ ನೆರವಾಗಿ ನೀಡಿದೆ. ಈ ಸಂಸ್ಥೆಗಳು ತಾವು ಉತ್ಪಾದಿಸಿದ ಅರಳಿ ಖಾದಿ ಮತ್ತು ಉಣ್ಣೆ ಖಾದಿಯನ್ನು ಮಾರಾಟ ಮಾಡುವಾಗ್ಗೆ, ಅವುಗಳ ಚಿಲ್ಲರೆ ಮಾರಾಟದ ರಿಯಾಯಿತಿಯನ್ನು ಸಹ ನೀಡಲಾಗುತ್ತಿದೆ. ಹೀಗೆ ಅರಳಿ ಖಾದಿ ಮತ್ತು ಉಣ್ಣೆ ಖಾದಿ ಉತ್ಪನ್ನಗಳ ಮಾರಾಟಕ್ಕೆ ಪ್ರೋತ್ಸಾಹ ನೀಡುತ್ತಿದೆ.ಈ ರೀತಿ ಖಾದಿ ಮತ್ತು ಉಣ್ಣೆ ಸಂಸ್ಥೆಗಳಿಗೆ ಮಾರಾಟದ ಮೇಲೆ ರಿಯಾಯಿತಿ ನೀಡುತ್ತಿದ್ದು 1991-92 ರಲ್ಲಿ 28,54,825-00 ರೂ.ಗಳವರೆಗೆ ನೀಡಲಾಗಿದೆ. ಇದಲ್ಲದೆ ಅರಳಿ ಖಾದಿ ಕೈಗಾರಿಕೆಯಲ್ಲಿ ನಿರತರಾಗಿರುವ ಕಸುಬುದಾರರಿಗೆ (ನೂಲುಗರಿಗೆ ಮತ್ತು ನೇಯ್ಗೆಯವರಿಗೆ) ರಾಜ್ಯ ಸರ್ಕಾರವು ಪ್ರೋತ್ಸಾಹಕರ ಮಜೂರಿಯನ್ನು ನೀಡುತ್ತಿದೆ.

3) ಬೆಳಗಾವಿ ಜಿಲ್ಲೆಯಲ್ಲಿ ಯಾರೇ ಆಗಲಿ ಖಾದಿ ಕೈಗಾರಿಕೆಯನ್ನು ನಡೆಸುವ ಉದ್ದೇಶದಿಂದ ಮಂಡಲಿಯನ್ನು ಸಂಪರ್ಕಿಸಿದಲ್ಲಿ ಅವರಿಗೆ ಮಂಡಳಿಯು ಎಲ್ಲಾ ವಿಧದಲ್ಲೂ ಪ್ರೋತ್ಸಾಹ ನೀಡುತ್ತಿದೆ. ಖಾದಿ ಉತ್ಪಾದನಾ ಘಟಕವನ್ನು ಖಾದಿ ಉದ್ದಿಮೆಯಲ್ಲಿ ಸ್ಥಾಪಿಸಲು ಉದ್ದೇಶ ಹೊಂದಿರುವ ಸಂಘ ; ಸಂಸ್ಥೆಗಳು ಘಟಕವನ್ನು ಆರಂಭಿಸುವ ಮುನ್ನಾ ಮುಂಬಯಿನ ಖಾದಿ ಆಯೋಗದಿಂದ ಲಕ್ಕೋ ಪ್ರಮಾಣ ಪತ್ರವನ್ನು ಪಡೆದಿರಬೇಕು. ಹೀಗೆ ಲಕ್ಕೊ ಪ್ರಮಾಣ ಪತ್ರವನ್ನು ಹೊಂದಿರುವಂತಹ ಸಂಘ : ಸಂಸ್ಥೆಗಳಿಗೆ ಮಂಡಳಿಯು ಹಣಕಾಸಿನ ನೆರವನ್ನು ನೀಡುತ್ತಿದೆ ಮತ್ತು ಎಲ್ಲಾ ವಿಧದ ಪ್ರೋತ್ಸಾಹವನ್ನು ಕೊಡುತ್ತದೆ.

4) ಮಂಡಳಿಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಖಾದಿ ಉತ್ಪಾದನಾ ಘಟಕವನ್ನು ಪ್ರಾರಂಭಿಸುವ ಸಲುವಾಗಿ ಮಂಡಲಿಯನ್ನು

ಸಂಪರ್ಕಿಸುವ ಎಲ್ಲಾ ಸಂಘ : ಸಂಸ್ಥೆಗಳಿಗೂ ಸಹ ಮಂಡಲಿಯು ಸಾಧ್ಯವಾದ ಎಲ್ಲಾ ಸಹಾಯವನ್ನು ನೀಡುತ್ತಿದೆ. ಮಂಡಲಿಯ ಅಧಿಕಾರಿಗಳು ಈ ಬಗೆಯ ಘಟಕಗಳ ಸ್ಥಾಪನೆಯಲ್ಲಿ ಮಾರ್ಗದರ್ಶನ ನೀಡುತ್ತಿರುವರು.

5) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮದಲ್ಲಿ ಅಂಬು ಚರಕಾ ಘಟಕ ಅಥವಾ ಖಾದಿ ಉತ್ಪಾದನಾ ಘಟಕವನ್ನು ತೆರೆಯಲು ಎಲ್ಲಾ ಸಾಧ್ಯತೆಗಳಿರುತ್ತದೆ. ಈಗಾಗಲೇ ಇದೇ ಚಚಡಿ ಗ್ರಾಮದಲ್ಲಿ ವೀರಭದ್ರೇಶ್ವರ ಗ್ರಾಮೋದ್ಯೋಗ ಅಸೋಸಿಯೇಷನ್ ಎಂಬ ಸಂಸ್ಥೆಯೊಂದು ಅಸ್ತಿತ್ವದಲ್ಲಿದೆ. ಖಾದಿ ಕೈಗಾರಿಕೆಗೆ ಈ ಸಂಘವು ಮಂಡಳಿಯಿಂದ ಆರ್ಥಿಕ ನೆರವನ್ನು ಕೋರಿದೆ. ಹೀಗೆ ಖಾದಿ ಕೈಗಾರಿಕೆಯನ್ನು ಸ್ಥಾಪಿಸಲು ಸಂಸ್ಥೆಯು ಪೂರ್ವಾಗತ್ಯೆಯಾಗಿ ಮುಂಬಯಿನ ಖಾದಿ ಆಯೋಗವು ನೀಡುವ ಲಕ್ಕೋ ಪ್ರಮಾಣ ಪತ್ರವನ್ನು ಹೊಂದಿರಬೇಕಾಗಿದೆ. ಈ ಕುರಿತು ಈ ಸಂಸ್ಥೆಗೆ ಎಲ್ಲಾ ಅವಶ್ಯಕ ಮಾರ್ಗದರ್ಶನವನ್ನೂ ಸಹ ನೀಡಲಾಗಿದ್ದು ಹಲವಾರು ಬಾರಿ ಪ್ರಸ್ತಾವನೆಯನ್ನು ಕಳುಹಿಸಿಕೊಂಡುವಂತೆಯೂ ಸಹ ತಿಳಿಸಲಾಗಿದೆ. 1988ರಿಂದಲೂ ಈ ಸಂಸ್ಥೆಗೆ ಈ ಬಗ್ಗೆ ತಿಳಿಸಲಾಗುತ್ತಿದ್ದು ಇತ್ತೀಚೆಗೆ ಅಂದರೆ ದಿ : 17-1-1990 ರಂದು ಸಹ ಈ ಬಗ್ಗೆ ಸಂಸ್ಥೆಗೆ ತಿಳಿಸಲಾಗಿದೆ. ಇಷ್ಟಾದರೂ ಸಹ ಸಂಸ್ಥೆಯು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿಯಮಾವಳಿಗಳನ್ನು ಅನುಸರಿಸಿ ಪ್ರಮಾಣ ಪತ್ರವನ್ನು ಪಡೆಯುವಲ್ಲಿ ವಿಫಲವಾಗಿದೆ. ಹೀಗೆ ಈ ಸಂಸ್ಥೆಯು ಸೂಕ್ತವಾಗಿ ಪ್ರತಿಕ್ರಿಯಿಸದಿದ್ದಾಗ್ಯೂ ಸಹ ಚಚಡಿ ಗ್ರಾಮದಲ್ಲಿ ಖಾದಿ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿರುವುದನ್ನು ಮನಗಂಡು ಆ ಗ್ರಾಮದಲ್ಲಿ ಖಾದಿ ಆಯೋಗವು ನೇರವಾಗಿ ಧನಸಹಾಯ ನೀಡಿರುವ ಬೈಲಹೊಂಗಲ ಹೊಸೂರು ಖಾದಿ ಗ್ರಾಮೋದ್ಯೋಗ ಉತ್ಪಾದಕ ಸಹಕಾರ ಸಂಘ ನಿಯಮಿತ, ಹೊಸೂರು ಈ ಸಂಸ್ಥೆಯ ಮೂಲಕ ಖಾದಿ ಉತ್ಪಾದನಾ ಘಟಕವನ್ನುಸ್ಥಾಪಿಸಲು ಖಾದಿ ಆಯೋಗವನ್ನು ಸಂಪರ್ಕಿಸಲಾಗಿದೆ ಮತ್ತು ಈ ಪ್ರಕ್ರಿಯೆ ಈಗಾಗಲೇ ಪ್ರಾರಂಭಿಸಲಾಗಿದೆ.

6) ಚಚಡಿ ಗ್ರಾಮದಲ್ಲಿ ಬೈಲಹೊಂಗಲ ಹೊಸೂರು ಖಾದಿ ಗ್ರಾಮೋದ್ಯೋಗ ಉತ್ಪಾದಕ ಸಹಕಾರ ಸಂಘ, ಹೊಸೂರು,ಈ ಸಂಸ್ಥೆಯ ಮೂಲಕ ಒಂದು ಖಾದಿ ಉತ್ಪಾದನಾ ಶಾಖೆಯನ್ನು ಪ್ರಾರಂಭಿಸಲು ಉದ್ದೇಶಿಸಿದೆ.

<u>ವಿಷಯ :- ಪರಿಶಿಷ್ಟ ಜಾತಿಯವರ ಬಗ್ಗೆ ಸಾಮಾಜಿಕ ಆರ್ಥಿಕ ಸಮೀಕ್ಷೆ.</u>

Q:1555

ಶ್ರೀ ಕೆ.ಸಿದ್ದಯ್ಯ (ಸಂತೆಮಾರನ ಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಪರಿಶಿಷ್ಟ ಜಾತಿಯವರ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಗಾಗಿ ಸರ್ಕಾರ ರೂಪಿಸಿರುವ ವಿವಿಧ ಕಾರ್ಯಕ್ರಮಗಳು ಯಾವುವು?

ಆ) ಸರ್ಕಾರವು ಇವರ ಪ್ರಗತಿಯನ್ನು ಪರಿವೀಕ್ಷಿಸಲು ಮತ್ತು ಮೌಲ್ಯಮಾಪನ ಮಾಡಲು ರಾಜ್ಯದಲ್ಲಿ ಒಂದು ಸಾಮಾಜಿಕ ಆರ್ಥಿಕ ಸಮೀಕ್ಷೆ ನಡೆಸುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :